## ದುಶ್ಚಟಗಳ ರಾಕ್ಷಸ

'ಆರೋಗ್ಯವೇ ಭಾಗ್ಯ' ಇದು ಅಚ್ಚ ಕನ್ನಡದ ಗಾದೆ ಮಾತು. ಉತ್ತಮ ಆರೋಗ್ಯ ನಮಗೆ ಬೇಕಾದರೆ ಆದಷ್ಟೂ ದುಶ್ಚಟಗಳಿಂದ ದೂರವಿರುವುದು ಒಳ್ಳೆಯದು. ಈ ದುಶ್ಚಟ ರಾಕ್ಷಸನ ಪ್ರತಿಕೃತಿಯನ್ನು ಬಂದ್ಯಾದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕ ರವಿರಾಜ ಮತ್ತು ಗ್ರಾಮಸ್ಥರು ಜನಜಾಗೃತಿ ಮೂಡಿಸಲು, ಗುಟ್ಕಾ ಮತ್ತು ಸಿಗರೇಟು ಪ್ಯಾಕೇಟು, ಮಡಕೆ, ಡ್ರಾಯಿಂಗ್ ಶೀಟ್ಸ್, ಹಳೆಯ ಬಟ್ಟೆ, ಹುಲ್ಲು ಬಳಸಿ ತಯಾರಿಸಿದ್ದಾರೆ. ಶಾಲೆಯ ಆವರಣದ ಮುಂಭಾಗ ಗೂಟದಲ್ಲಿ ಕಾಲುಗಳನ್ನು ಮಾಡಿ ನಿಲ್ಲಿಸಿದ್ದಾರೆ.

**-ಎಚ್. ನಾಗರಾಜ್ ನಾಯ್ಕ್, ಅರಳಸುರಳಿ**






## ಬುರ್-ಬುರ್ ಮಾರಮ್ಮ!

ಹಳ್ಳಿ – ಪಟ್ಟಣ ಎನ್ನದೇ ಊರೂರು ತಿರುಗಿ ಭಿಕ್ಷಾಟನೆ ಮಾಡಿ ಹೊಟ್ಟೆ ಹೊರೆದುಕೊಳ್ಳುವ ಇವರನ್ನು ಊರು ಮಾರಮ್ಮ... ಗಾಳಿ ಮಾರಮ್ಮ... ಬುರು ಬುರು ಮಾರಮ್ಮ ಎಂಬೆಲ್ಲ ಹೆಸರಿನಿಂದ ಕರೆಯುತ್ತಾರೆ. ಸಣ್ಣ ಮರದ ಪೆಟ್ಟಿಗೆಯೊಂದರಲ್ಲಿ ದೇವಿಯ ಮೂರ್ತಿಯನ್ನಿಟ್ಟುಕೊಂಡು ಕೇರಿ ಕೇರಿಗೆ ಹೋಗಿ ಉದ್ದನೆಯ ಸೆಣಬಿನ ಚಾವಟಿಯಿಂದ ಮೈಗೆ ಸೆಳೆದುಕೊಳ್ಳುತ್ತಾ ಎಲ್ಲರನ್ನೂ ಕೂಗಿ ಕೂಗಿ ಕರೆಯುತ್ತಾರೆ. ಈ ಗಾಳಿ ಮಾರಮ್ಮನಿಗೆ ಹೆಂಗಳೆಯರು ಮೊರದಲ್ಲಿ ಶಕ್ತ್ಯಾನುಸಾರ ಅಕ್ಕಿ, ಎಲೆ, ಅಡಿಕೆ, ಈರುಳ್ಳಿ, ಹಸಿ ಮೆಣಸು, ಚಿಲ್ಲರೆ ಹಣವನ್ನು ಇಟ್ಟು ಬೇಡಿಕೊಳ್ಳುವ ಸಂಪ್ರದಾಯವಿದೆ. ಈ ಜನಾಂಗ ಉತ್ತರ, ಮಧ್ಯ ಕರ್ನಾಟಕದಲ್ಲಿ ಹೆಚ್ಚಾಗಿ ಕಂಡು ಬರುತ್ತಾರೆ.

**-ಸೋಮ ಮಂಡಘಟ್ಟ, ಶಿವಮೊಗ್ಗ**

## ಮಲಗಿದ ಮಾರುತಿ!

ಕುಳಿತು ಧ್ಯಾನಾಸಕ್ತನಾಗಿರುವ ಶಿವನನ್ನು ಬಿಟ್ಟರೆ ಉಳಿದ ಎಲ್ಲ ದೇವರ ವಿಗ್ರಹಗಳು ಕಣ್ಣುಗಳನ್ನು ಬಿಟ್ಟಂತೆ ಕುಳಿತ/ ನಿಂತ ನಿಲುವಿನಲ್ಲೇ ಕಂಡುಬರುತ್ತವೆ. ಇಂತಹದರಲ್ಲಿ ದೇವರೇ ಕಣ್ಣು ಮುಚ್ಚಿಕೊಂಡು ಮಲಗಿದ್ದರೆ ಹೇಗೆ?! ಈ ಸ್ಥಿತಿಯ ಭಂಗಿಯನ್ನು ನೋಡಬೇಕೆಂದರೆ ನೀವು ಕುಲ್ತಾಬಾದ್ (ಮಹಾರಾಷ್ಟ್ರದ ಔರಂಗಬಾದ್ ಜಿಲ್ಲೆ)ಗೆ ಹೋಗಿ ನೋಡಬೇಕು. ಅಲ್ಲಿ ಮಾರುತಿ ಮಲಗಿದ್ದಾನೆ! ಅಲ್ಲಿ ಮಲಗಿದ ಮಾರುತಿಯನ್ನೇ ಭಕ್ತರು ಅರ್ಚಿಸುತ್ತಾರೆ. ಇದರ ಪುರಾಣ ಕಥೆ ಹೀಗಿದೆ: ಭಕ್ತರು ಸೇರಿ, ರಾತ್ರಿಯಲ್ಲಿ ರಾಮ ಭಜನೆ ಮಾಡುತ್ತಿದ್ದರಂತೆ. ಆ ವೇಳೆಯಲ್ಲಿ ಆಕಾಶದಲ್ಲಿ ಹಾರಿಹೋಗುತ್ತಿದ್ದ ರಾಮಭಕ್ತ ಆಂಜನೇಯ ಆ ಭಜನೆಯನ್ನು ಕೇಳಬೇಕೆಂದು ಮಾರುವೇಷದಲ್ಲಿ ಬಂದು ಕುಳಿತು ಆಲಿಸುತ್ತಿದ್ದವನು ಅದೇಕೋ ಹಾಗೇ ಮಲಗಿದನಂತೆ. ಭಜನೆ ಮುಗಿದ ನಂತರ ನೋಡಲು ಸ್ಥಳದಲ್ಲಿ ಆಂಜನೇಯನ ಆಕೃತಿ ಮೂಡಿತ್ತಂತೆ. ನಂತರ ಆ ಭಂಗಿಯಲ್ಲೇ ಮೂರ್ತಿಯನ್ನು ನಿರ್ಮಿಸಿ, ಬರೀ ಕುಂಕುಮದಿಂದಲೇ ಅರ್ಚಿಸುವ ಸಂಪ್ರದಾಯವಿದೆ.

**-ಎಸ್. ಓಂಕಾರಯ್ಯ ತವನಿಧಿ, ದಾವಣಗೆರೆ**

